# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.13/2023

| | | |
|---|---|---|
| ಸಾಕ್ಷಿದಾರರ ಹೆಸರು | – ಮಹಲಿಂಗಪ್ಪ | ಸಿಡಬ್ಲ್ಯೂ-4 |
| ತಂದೆಯ ಹೆಸರು | – ಕರಿಯಪ್ಪ | ಪಿಡಬ್ಲ್ಯೂ-4 |
| ವಯಸ್ಸು | – 38 ವರ್ಷ | |
| ಉದ್ಯೋಗ | – ಹೊಟೆಲ್ ನಲ್ಲಿ ಕೆಲಸ | |
| ವಾಸ | – ಆನೆಸಿದ್ರಿ ಗ್ರಾಮ | |

**ದಿನಾಂಕಃ06.03.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಚಾಸಾ.2 ಮತ್ತು 3 ನನಗೆ ಪರಿಚಯವಿದ್ದಾರೆ. ಸಾಕ್ಷಿಗೆ ನಿಪಿ-2 ,3 ರ ದಾಖಲೆಗಳನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಸಹಿಗಳನ್ನು ನಿಪಿ-2(ಸಿ) ಮತ್ತು 3(ಸಿ) ಎಂದು ಗುರುತಿಸಲಾಯಿತು. ಅಂದಾಜು 2 ವರ್ಷಗಳ ಹಿಂದೆ ಶನೇಶ್ವರ ದೇವಸ್ಥಾನದ ಸಮೀಪ ಅಂದರೆ ಆನೆಸಿದ್ರಿ ಗೇಟ್ ಬಳಿ ಈ ದಾಖಲೆಗಳಿಗೆ ಸಹಿ ಮಾಡಿದ್ದೇನೆ. ಅಪಘಾತವಾದ ಕಾರಣಕ್ಕೆ ಸಹಿಮಾಡಿದ್ದೇನೆ. ಪೊಲೀಸರು ಪಂಚನಾಮೆ ಮಾಡಿದ್ದೇವೆ ಸಹಿ ಮಾಡಿ ಎಂದು ದಾಖಲೆಗೆ ಸಹಿ ಪಡೆದಿದ್ದಾರೆ. ಅದೇ ರೀತಿ ಸಾಕ್ಷಿಯು ನಿಪಿ-4 ಪೋಟೋದಲ್ಲಿ ತಾನು ಇರುವುದನ್ನು ಗುರುತಿಸಿದ್ದಾರೆ. ಸದರಿ ಪೋಟೋ ಶನೇಶ್ವರ ದೇವಸ್ಥಾನದ ಬಳಿ ತೆಗೆದಿರುತ್ತಾರೆ. ಪೊಲೀಸರು ಮಹಜರ್ ಮಾಡಿದ ಕಾಲಕ್ಕೆ ಸದರಿ ಪೋಟೋ ತೆಗೆದಿದ್ದಾರೆ. ಆ ಎರಡು ದಾಖಲೆಗಳಿಗೆ ನನ್ನ ಜೊತ ಬೇರೆ ಯಾರು ಸಹಿ ಮಾಡಿಲ್ಲ. ನಿಪಿ-2, 3 ರಲ್ಲಿ ಏನು ಬರೆಯಲಾಗಿದೆ ಗೊತ್ತಿಲ್ಲ. ಪೊಲೀಸರು ಓದಿ ಹೇಳಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ದಿಃ04.08.2022 ರಂದು ಅಪಘಾತದ ಸ್ಥಳದಲ್ಲಿ ನಿಪಿ-2 ,3 ದಾಖಲೆಗಳಿಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಆಗ ಸಮಕ್ಷಮ ಪೊಲೀಸರು ವಾಹನ ನಂ.ಎಂ ಹೆಚ್ 45 ಎಲ್ 6367 ಈ ವಾಹನವನ್ನು ಅಮಾನತ್ತು ಪಡಿಸಿಕೊಂಡು ಬೆಳಿಗ್ಗೆ 10 ರಿಂದ 11 ರವರೆಗೆ ಆನೆಸಿದ್ರಿ ಗೇಟ್ ಬಳಿ ಮಹಜರ್ ಮಾಡಿ ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಕಚ್ಚಾ ನಕಾಶೆ ತಯಾರಿಸಿ ಎರಡು ದಾಹಲೆಗಳಿಗೆ ಸಹಿ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ ಕೆ ವಕೀಲರಿಂದ-ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು